# CHAMUNDESHWARI ELECTRICITY SUPPLY CORPORATION LIMITED

## ( A Govt of Karnataka Undertaking)

Corporate office address
No 29, KaveriGrameena Bank Road,
2nd Stage, Vijayanagara, Hinkal,.
Mysore-570017
CIN:U40109KA2004SGC035177

Office of the
Assistant Executive, Engineer (Ele.,)
CESC, O&M,Sub-Division,
Saligrama.

**NO:CESC/SLGR/AEE(E)/AE(T)/17-18/:** 1318-20 **Date:** 31/3/2018

ದಿನಾಂಕ; 15.03.2018 ರಂದು ಶ್ರೀ. ನಾಗೇಶ್ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ, ಹುಣಸೂರು ರವರ ಅಧ್ಯಕ್ಷತೆಯಲ್ಲಿ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆಯನ್ನು ಸಾಲಿಗ್ರಾಮ ಉಪ ವಿಭಾಗ ಕಛೇರಿಯಲ್ಲಿ ನಡೆಸಲಾದ ಸಭೆಯ ನಡಾವಳಿಗಳು.

ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿ ಸಭೆಯನ್ನು ಮದ್ಯಾಹ್ನ: 03:00ಕ್ಕೆ ಪ್ರಾರಂಭಿಸಿದರು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :

1. ಶ್ರೀ. ಸಿದ್ದಪ್ಪ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಪವಿಭಾಗ, ಸಾಲಿಗ್ರಾಮ.
2. ಶ್ರೀ ಎಂ.ಪಿ. ಧರ್ಮ, ಸಹಾಯಕ ಇಂಜಿನಿಯರ್(ತಾ), ಸಾಲಿಗ್ರಾಮ ಉಪ ವಿಭಾಗ,
3. ಶ್ರೀ ಸುನಿಲ್ ಯಾದವ್, ಸಹಾಯಕ ಇಂಜಿನಿಯರ್(ವಿ), ಸಾಲಿಗ್ರಾಮ ಶಾಖೆ,
4. ಶ್ರೀ ಎಸ್. ಸುರೇಶ, ಕಿರಿಯ ಇಂಜಿನಿಯರ್ (ವಿ) ಭೇರ್ಯ ಶಾಖೆ,
5. ಶ್ರೀ ಶಿವಣ್ಣ, ಕಿರಿಯ ಇಂಜಿನಿಯರ್ (ವಿ) ಮಿರ್ಲೆ ಶಾಖೆ,

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಾರ್ವಜನಿಕರರು ಹಾಗು ಪತ್ರಕರ್ತರು ಜೊತೆಯಲ್ಲಿ ಈ ಕೆಳಗಿನ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಚರ್ಚಿಸಲಾಯಿತು.

ಮುಂದುವರೆದಿದೆ.,

ಸಭೆಯಲ್ಲಿ ಈ ಕೆಳಕಂಡ ಕುಂದು ಕೊರತೆಯನ್ನು ಗ್ರಾಹಕರಿಂದ/ಸಾರ್ವಜನಿಕರುಗಳಿಂದ ದೂರುಗಳನ್ನು/ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ.ಸ | ಅರ್ಜಿದಾರ ವಿಳಾಸ | ಮೊಬೈಲ್ ಸಂಖ್ಯೆ | ಗ್ರಾಮ | ಮನವಿಯ ವಿವರ | ಸಮುಜಾಯಿಷಿ ಉತ್ತರ |
|---|---|---|---|---|---|
| 1 | ರಾಜೇಗೌಡ ಮತ್ತು ಕುಮಾರ ಬಿನ್ ತಿರುಮಲೇಗೌಡ | 9844629568<br>9482705562 | ಬೆಟ್ಟಹಳ್ಳಿ | ಬೆಟ್ಟಹಳ್ಳಿ ಗ್ರಾಮದಲ್ಲಿ ಲೋ ವೋಲ್ಟೇಜ್ ಸಮಸ್ಯೆಯಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೋರಿರುತ್ತಾರೆ ಹಾಗು ಹಾಲಿ ಇರುವ ಪರಿವರ್ತಕವನ್ನು ಲೋಡ್ ಸೆಂಟರ್‌ಗೆ ಸ್ಥಳಾಂತರಿಸಲು ಕೋರಿರುತ್ತಾರೆ. | ಅಂದಾಜು ಪಟ್ಟಿಯನ್ನು ತಯಾರಿಸಿ ಶೀಘ್ರವಾಗಿ ವಿಭಾಗಿಯ ಕಛೇರಿಗೆ ಸಲ್ಲಿಸಲು ಮತ್ತು ಸ್ಥಳ ಪರಿಶೀಲನೆ ಮಾಡಿ ಲೋಡ್ ಸೆಂಟರ್‌ಗೆ ಪರಿವರ್ತಕವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲು ಸಾಲಿಗ್ರಾಮ ಶಾಖಾಧಿಕಾರಿಗೆ ಸೂಚಿಸಲಾಯಿತು. |
| 2 | ಎಮ್.ಆರ್. ಶಂಕರ ಮತ್ತು ಹೆಚ್.ಪಿ. ನಾಗರಾಜೇಗೌಡ | 9638581722<br>9611777613 | ಕೆ.ಬಿ. ಕಾವಲ್ | ಐ.ಪಿ.ಸೆಟ್‌ಗಳಿಗೆ ಲೋ ವೋಲ್ಟೇಜ್ ಸಮಸ್ಯೆಯಿರುವುದಾಗಿ ತಿಳಿಸಿರುತ್ತಾರೆ. | ಅಕ್ರಮ- ಸಕ್ರಮ ಯೋಜನೆಯಡಿಯಲ್ಲಿ ಹೊಸದಾಗಿ ಈ ಸ್ಥಳಕ್ಕೆ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ವಿಭಾಗಿಯ ಕಛೇರಿಗೆ ಸಲ್ಲಿಸಲಾಗಿದೆಯೆಂದು ಸಂಬಂದ ಪಟ್ಟ ಶಾಖಾಧಿಕಾರಿಯವರು ತಿಳಿಸಿರುತ್ತಾರೆ. |
| 3 | ಮಹೇಶ್ | 9740976942 | ತಂದ್ರೆ | ಐ.ಪಿ.ಸೆಟ್ ಫೀಡರ್ ನಲ್ಲಿ ಸರಿಯಾದ ಸಮಯಕ್ಕೆ ವಿದ್ಯುತ್ ಸರಬರಾಜು ಕಲ್ಪಿಸುತ್ತಿರುವುದಿಲ್ಲ, ಇದರಿಂದ ತುಂಬಾ ತೊಂದರೆಯಾಗಿರುತ್ತದೆಯೆಂದು ಕೋರಿರುತ್ತಾರೆ. | ವಿದ್ಯುತ್ ವಿತರಣಾ ಕೇಂದ್ರದ ಸಮಸ್ಯೆ ಹಾಗು ಲೈನ್ ದೋಷಗಳು ಇದ್ದುದ್ದರಿಂದ ನಿಗಧಿತ ಸಮಯಕ್ಕೆ ವಿದ್ಯುತ್ ಸರಬರಾಜು ಕಲ್ಪಿಸಲು ಸಾದ್ಯವಾಗಿರುವುದಿಲ್ಲ, ಮುಂದಿನ ದಿನಗಳಲ್ಲಿ ಸದರಿ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಿಸಿದ ಶಾಖಾಧಿಕಾರಿಗಳು ತಿಳಿಸಿರುತ್ತಾರೆ. |
| 4 | ಪುಟ್ಟರಾಜು ಸೋಮಪ್ಪ ಪರಮೇಶ ಸ್ವಾಮಿ | 9901349673<br>9980094242<br>7829546798<br>8152953683 | ತಂದ್ರೆ | ಯು.ಎನ್.ಐ.ಪಿ ಯೋಜನೆಯಡಿಯ ಕಾಮಗಾರಿ ಅಪೂರ್ಣಗೊಂಡಿದ್ದು, ಪರಿವರ್ತಕವನ್ನು ಅಳವಡಿಸಿರುವುದಿಲ್ಲ ಎಂದು ಕೋರಿರುತ್ತಾರೆ. | ಸದರಿ ವಿಷಯಕ್ಕೆ ಶೀಘ್ರವಾಗಿ ಪರಿವರ್ತಕವನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಸಂಬಂದ ಪಟ್ಟ ಶಾಖಾಧಿಕಾರಿಯವರಿಗೆ ತಿಳಿಯಪಡಿಸಲಾಯಿತು. |
| 5 | ಮಹೇಶ್ | 9740976942 | ತಂದ್ರೆ | ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ 02 ಕುಟುಂಬವಿರುವ ಮನೆಗೆ ಈಗಾಗಲೇ ಸಂಪರ್ಕ ತೆಗೆದುಕೊಂಡಿದ್ದು ರೇಷನ್ ಕಾರ್ಡ್‌ನಲ್ಲಿ ಆರ್.ಆರ್. ನಂಬರ್ ನಮೂದಾಗಿರುವುದರಿಂದ ಹೊಸದಾಗಿ ಗ್ರಾಮ ಪಂಚಾಯ್ತಿಯಿಂದ ಹೊಸದಾಗಿ ನಿರ್ಮಿಸಿಕೊಂಡಿರುವ ಮನೆಗೆ ಎನ್.ಒ.ಸಿ ನೀಡುತ್ತಿರುವುದಿಲ್ಲವೆಂದು ಕೋರಿರುತ್ತಾರೆ. | ಸದರಿ ಮನೆಗೆ ಸೌಭಾಗ್ಯ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲು ಸಂಬಂದಪಟ್ಟ ಶಾಖಾಧಿಕಾರಿಯವರಿಗೆ ತಿಳಿಯಪಡಿಸಲಾಯಿತು. |
| 6 | ಸ್ವಾಮಿ ಸೋಮಪ್ಪ | 8152953683<br>9980094242 | ತಂದ್ರೆ | ತೋಟದಲ್ಲಿರುವ ಸುಮಾರು 08 ಮನೆಗಳಿಗೆ ಈಗ ಐ.ಪಿ ಫೀಡರ್ ನಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಸದರಿ ಮನೆಗಳಿಗೆ ನೀರಂತರ ಜ್ಯೋತಿ ಫೀಡರ್ ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | ಸದರಿ ಕಾಮಗಾರಿಗೆ ಸುಮಾರು 01 ಕಿಲೋ ಮೀಟರ್‌ನಷ್ಟು ಎಲ್.ಟಿ ಲೈನಿನ ಅವಶ್ಯಕತೆಯಿದ್ದು ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲು ಸಂಬಂದ ಪಟ್ಟ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 7 | ಅರ್ಜುನೇಗೌಡ | 9902319827 | ಕಂಚಿನಕೆರೆ | ಹಾಲಿ ಇರುವ 63 ಕೆ.ವಿ.ಎ ಪರಿವರ್ತಕಕ್ಕೆ 18 ಸಂಖ್ಯೆಯ ಐ.ಪಿ. ಸ್ಥಾವರಗಳಿದ್ದು, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | ಸದರಿ ಸ್ಥಳಕ್ಕೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಲು ಸಂಬಂದ ಪಟ್ಟ ಶಾಖಾಧಿಕಾರಿಯವರಿಗೆ ತಿಳಿಯಪಡಿಸಲಾಯಿತು. |
| 8 | ಅಜೀತ್ | 9731369326 | ಕಳ್ಳಿಮುದ್ದನಹಳ್ಳಿ | ಅ) ಸದರಿಯವರು ಹಾಲಿ ಇರುವ ಲೈನಿನ ಕೆಳಗೆ ಮನೆಯನ್ನು ನಿರ್ಮಿಸಿಕೊಂಡಿದ್ದು, ಸದರಿ ಲೈನನ್ನು ಸ್ಥಳಾಂತರಿಸಿಕೊಡಲು ಕೋರಿರುತ್ತಾರೆ.<br><br>ಆ) ಅಕ್ರಮ ಸಕ್ರಮ ಯೋಜನೆಯಡಿ ಸೂಕ್ತ ಸ್ಥಳಕ್ಕೆ ಪರಿವರ್ತಕವನ್ನು ಅಳವಡಿಸಿರುವುದಿಲ್ಲವೆಂದು ಕೋರಿರುತ್ತಾರೆ. | ಅ) ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿ ಲೈನನ್ನು ಸ್ಥಳಾಂತರಿಸಿಕೊಳ್ಳಲು ಸದರಿಯವರಿಗೆ ತಿಳಿಯಪಡಿಸಲಾಯಿತು.<br><br>ಆ) ಸಂಬಂಧಿಸಿದ ವಿಷಯದ ಬಗ್ಗೆ ಸ್ಥಳ ಪರಿಶೀಲನೆ ನಡೆಸಲು ಸಂಬಂದ ಪಟ್ಟ ಶಾಖಾಧಿಕಾರಿಯವರಿಗೆ ತಿಳಿಯಪಡಿಸಲಾಯಿತು. |

| | | | | | |
|---|---|---|---|---|---|
| 9 | ಜಯಮ್ಮ ಕೋಂ ಲೇಟ್ ಕೃಷ್ಣೇಗೌಡ | 9632581379 | ಚಿಕ್ಕನಾಯಕನಹಳ್ಳಿ | ಹಾಲಿ ಮನೆಗೆ ಐ.ಪಿ. ಫೀಡರ್‌ನಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು, ನಿರಂತರ ಜ್ಯೋತಿ ಫೀಡರ್‌ಗೆ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ. | ಸದರಿ ಕಾಮಗಾರಿಗೆ 620 ಮೀಟರ್ ನಷ್ಟು ಸೆಕೆಂಡರಿ ಮಾರ್ಗವನ್ನು ವಿಸ್ತರಿಸಿ ವಿದ್ಯುತ್ ಸರಬರಾಜನ್ನು ಕಲ್ಪಿಸಬೇಕಾಗಿದ್ದು, ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸಂಬಂಧ ಪಟ್ಟ ಶಾಖಾಧಿಕಾರಿಯವರು ಸುವಂತೆ ಕೋರಿರುತ್ತಾರೆ. |
| 10 | ರಾಜೇಗೌಡ ಬಿನ್ ಕರಿಗೌಡ | 9663793550 | ಲಕ್ಕೀಕುಪ್ಪೆ | ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿ ಮಾಡಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ. | ಸದರಿ ವಿಷಯಕ್ಕೆ ಶೀಘ್ರವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲು ಸಂಬಂದ ಪಟ್ಟ ಶಾಖಾಧಿಕಾರಿಯವರಿಗೆ ತಿಳಿಯಪಡಿಸಲಾಯಿತು. |

ಸಭೆಯಲ್ಲಿದ್ದ ಸಾರ್ವಜನಿಕರು ಮತ್ತು ಪತ್ರಕರ್ತರಿಗೆ ವಂದಿಸಿ ಮೇಲೆ ತಿಳಿಸಿರುವ ಎಲ್ಲಾ ಕುಂದು ಕೊರತೆಗಳನ್ನು ಮುಂದಿನ ಜನ ಸಂಪರ್ಕ ಸಭೆಯ ಒಳಗಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿ ಮತ್ತು ಆದ್ಯತೆ ಮೇರೆಗೆ ಕ್ರಮವಹಿಸುವಂತೆಯೂ ಸಂಬಂದ ಪಟ್ಟ ಅಧಿಕಾರಿಗಳಿಗೆ ಪ್ರತಿ ದಿನ ಈ ಸಂಬಂಧ ಪರಾಮರ್ಶಿಸುವಂತೆ ಸೂಚಿಸಿ ಸಭೆಯನ್ನು ಮದ್ಯಾಹ್ನ 05:30 ಕ್ಕೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಉಪ ವಿಭಾಗ, ಸೆಸ್ಕ್, ಸಾಲಿಗ್ರಾಮ.

ಪ್ರತಿಯನ್ನು ತಮ್ಮ ಆದ್ಯ ಗಮನಕ್ಕೆ ಸಲ್ಲಿಸಲಾಗಿದೆ:-

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ವಲಯ, ಚಾವಿಸನಿನಿ. ಮೈಸೂರುರವರ ಆದ್ಯ ಗಮನಕ್ಕಾಗಿ
2. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ, ವೃತ್ತ, ಸೆಸ್ಕ್, ಮೈಸೂರುರವರ ಆದ್ಯ ಗಮನಕ್ಕಾಗಿ.
3. ಕಾರ್ಯಪಾಲಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಸೆಸ್ಕ್, ಹುಣಸೂರುರವರ ಆದ್ಯ ಗಮನಕ್ಕಾಗಿ.

ಪ್ರತಿಗಳನ್ನು:-

4. ಸಹಾಯಕ ಇಂಜಿನಿಯರ್(ತಾಂತ್ರಿಕ), ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
5. ಹಿರಿಯ ಸಹಾಯಕರು, ಸೆಸ್ಕ್, ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
6. ಶಾಖಾಧಿಕಾರಿಗಳು, ಸಾಲಿಗ್ರಾಮ, ಮಿರ್ಲೆ, ಭೇರ್ಯ ರವರ ಮಾಹಿತಿಗಾಗಿ.
7. ಕಛೇರಿ ಕಡತಕ್ಕೆ.